# ಅಮ್ಮಾ ಈಗೇನೂ ಆಗಿಲ್ಲ

■ ಎಸ್.ಎನ್. ಚಂದ್ರಕಲಾ ಕೊಪ್ಪ
ಕಲೆ: ಸಂತೋಷ್ ಸಸಿಹಿತ್ಲು

ಅಮ್ಮಾ ಈಗೇನೂ ಆಗಿಲ್ಲ
ಸೇತುಬಂಧ ಶುರುವಾಗಿಲ್ಲ
ಪಾಠವೆಲ್ಲ ಮುಂದಕ್ಕೆ
ನಾಳೆ ಹೋಗುವೆ ಶಾಲೆಗೆ

ಅಮ್ಮಾ ಈಗೇನೂ ಆಗಿಲ್ಲ
ನೋಟ್ಸ್ ಇನ್ನೂ ಬರೆಸಿಲ್ಲ
ಓದುವುದೆಲ್ಲಾ ಮುಂದಕ್ಕೆ
ಆಟವಾಡುವೆ ಸುಮ್ಮನೆ

ಅಮ್ಮಾ ಈಗೇನೂ ಆಗಿಲ್ಲ
ಪಾಠಗಳಿನ್ನೂ ಮುಗಿದಿಲ್ಲ
ಪುನರಾವರ್ತನೆ ಮುಂದಕ್ಕೆ
ಟಿ.ವಿ. ನೋಡುವೆ ಬಿಮ್ಮನೆ


ಅಮ್ಮಾ ಈಗೇನೂ ಆಗಿಲ್ಲ
ಪರೀಕ್ಷೆಗಳಿನ್ನೂ ಬಂದಿಲ್ಲ
ಓದುವುದಾಗಿದೆ ಮುಂದಕ್ಕೆ
ಹೊದ್ದು ಮಲಗುವೆ ಬೆಚ್ಚಗೆ

ಅಮ್ಮಾ ಈಗೇನೂ ಆಗಿಲ್ಲ
ಗಣಿತ ಮಾತ್ರ ಪಾಸಾಗಿಲ್ಲ
ಪರೀಕ್ಷೆಯಿದೆ ಮುಂದಕ್ಕೆ
ಮತ್ತೆ ಬರೆಯುವೆ ಬಿಡದೆ

ಅಮ್ಮಾ ಈಗೇನೂ ಆಗಿಲ್ಲ
ಅಂಕ ಮಾತ್ರ ಬಂದಿಲ್ಲ
ಜೀವನವಿದೆ ಮುಂದಕ್ಕೆ
ಮುನ್ನಡೆವೆ ಧೃತಿಗೆಡದೆ!



## ಕುಂಚ ಪ್ರಪಂಚ







**ವಂಶಿಕಾ ವಿವೇಕ್ ಎ.**
3ನೇ ತರಗತಿ,
ಯೂರೊ ಸ್ಕೂಲ್, ಹಾಸನ



**ಸನ್ನಿಧಿ ವಿ ರಾವ್**
5ನೇ ತರಗತಿ,
ಶ್ರೀ ಅರಬಿಂದೊ ಪಬ್ಲಿಕ್ ಸ್ಕೂಲ್,
ಬೆಂಗಳೂರು







**ಮೋನಿಷಾ ಎ.ಎಸ್.**
7ನೇ ತರಗತಿ, ಸರ್ಕಾರಿ
ಹಿರಿಯ ಪ್ರಾಥಮಿಕ ಶಾಲೆ,
ಅರದೇಶನಹಳ್ಳಿ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in